ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಗುರುವಾರ, ದಿನಾಂಕ ೧೯ನೇ ಮೇ ೧೯೫೮, ವೈಶಾಖ ೨೯, ೧೮೮೦, ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ

೧೧ ಗಂಟೆ ೫ ನಿಮಿಷಕ್ಕೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಆಪರು ಪೀಠವನ್ನಲಂಕರಿಸಿದರು.]

ಸಂತಾಪ ಸೂಚನೆ

ಅಧ್ಯಕ್ಷರು.—ಈಗ ಸಂತಾಪ ಸೂಚನೆ ಪ್ರಕಟಣೆ.

ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾದ ಶ್ರೀ ಎಂ ಎ. ಗೋಪಾಲಸ್ವಾಮಿ ಐಯ್ಯಂಗಾರ್‌ರವರು ದಿನಾಂಕ ೧೩-೫-೧೯೫೮ ರಂದು ನಿಧನರಾದರು. ಪಾನ್ಯರು ೧೯೩೪ ರಿಂದ ೧೯೬೬ ರವರೆಗೆ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು. ಶ್ರೀಯುತರು ೧೯೬೬ ರಿಂದ ೧೯೬೯ ರವರೆಗೆ ವಿಧಾನ ಪರಿಷತ್ತಿನ ಸದಸ್ಯರಾಗಿ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ.

ನಿಧನ ಹೊಂದಿದ ಸದಸ್ಯರಿಗೆ ಗೌರವದ ಅಂಗವಾಗಿ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಸದಸ್ಯರು ಎಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಿದರು)

ಈ ಸಭೆಯಲ್ಲಿ ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಅಗಲಿದ ಸದಸ್ಯರ ಕುಟುಂಬದವರಿಗೆ ಕಳುಹಿಸಿಕೊಡಲಾಗುವುದು.

ಈಗ ವಸತಿ ಖಾತೆಗೆ ಸಂಬಂಧಿಸಿದಂತೆ ಮಾನ್ಯ ಮಂತ್ರಿಯವರಿಂದ ಉತ್ತರ.

ವಿತ್ತೀಯ ಕಾರ್ಯಕಲಾಪಗಳು

ಬೇಡಿಕೆ ಕ್ರ.ಸಂ. ೩೨,೩೩ ಮತ್ತು ೩೪ ವಸತಿ ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಇಲಾಖೆಗಳು.

ಶ್ರೀ ಮಹಮದ್ ಮೊಯಿನುದ್ದೀನ್ (ವಸತಿ ಖಾತೆ ರಾಜ್ಯ ಸಚಿವರು),—ಸನ್ಮಾನ್ಯ ಅಧ್ಯಕ್ಷರೇ, ವಸತಿ ಖಾತೆ ಬೇಡಿಕೆ ಮೇಲೆ ಸನ್ಮಾನ್ಯ ಸದಸ್ಯರುಗಳು ಕೊಟ್ಟಿರುವಂಥ ಸಲಹೆ ಮತ್ತು ಟೀಕೆ ಟಿಪ್ಪಣಿಗಳಿಗೆ ಉತ್ತರ ಕೊಡಲು ಇವತ್ತು ತಮ್ಮಿಂದ ನಾನು ಅಪ್ಪಣೆಯನ್ನು ಬಯಸುತ್ತೇನೆ.

ಮೊಟ್ಟ ಮೊದಲನೆಯದಾಗಿ ಸನ್ಮಾನ್ಯ ಸದಸ್ಯರಾದ ಶ್ರೀ ಬಸವಲಿಂಗಪ್ಪನವರು ಕೆಲವು ಸಲಹೆಗಳನ್ನು ಮತ್ತು ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಆದಕ್ಕೆ ನಾನು ಪಾಯಿಂಟ್ ಬೈ ಪಾಯಿಂಟ್ ಉತ್ತರ ಕೊಡುತ್ತೇನೆ. ಒಂದನೆಯದಾಗಿ ಸನ್ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಎಂದರೆ, ೧೪.೪೯ ಲಕ್ಷ ಸೈಟ್‌ಲೆಸ್ ಬೆನಿಫಿಷಿಯರಿಗಳನ್ನು ಐಡೆಂಟಿಫೈ ಮಾಡಿ ಕೇವಲ ೫ ಲಕ್ಷ ಜನರಿಗೆ ಮಾತ್ರ